'ಹಾಲು ಉತ್ಪಾದನೆ ಕುಸಿತ'



■ ವಿಕ ಸುದ್ದಿಲೋಕ ಬೆಂಗಳೂರು

ಉತ್ಕೃಷ್ಟ ಮೇವು, ರಸಮೇವು, ಪಶು ಆಹಾರ ಹಾಗೂ ಆಧುನಿಕ ತಾಂತ್ರಿಕತೆಗಳ ಕೊರತೆಯಿಂದ ವಿಶ್ವದ ಸರಾಸರಿ ಹಾಲು ಉತ್ಪಾದನೆಯಲ್ಲಿ ಭಾರತದ ಪ್ರಮಾಣ ಕಡಿಮೆಯಾಗಿದೆ ಎಂದು ಭಾರತೀಯ ಹುಲ್ಲುಗಾವಲು ಮತ್ತು ಮೇವು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಅಮರೇಶ ಚಂದ್ರ ಅಭಿಪ್ರಾಯಪಟ್ಟರು.

ಬೆಂಗಳೂರು ಕೃಷಿ ವಿವಿ ಹಾಗೂ ಉತ್ತರ ಪ್ರದೇಶದ ಭಾರತೀಯ ಹುಲ್ಲುಗಾವಲು ಮತ್ತು ಉತ್ತಮ ಮೇವು ಸಂಶೋಧನಾ ಸಂಸ್ಥೆಗಳ ಸಹಯೋಗದೊಂದಿಗೆ ಜಿಕೆವಿಕೆ ಆವರಣದಲ್ಲಿ ಆಯೋಜಿಸಿದ್ದ 'ಸುಸ್ಥಿರ ಪರಿಸರ ಸ್ನೇಹಿ' ಹುಲ್ಲುಗಾವಲು, ಮೇವು ಮತ್ತು ಪ್ರಾಣಿ ವಿಜ್ಞಾನ ನಾವೀನ್ಯತೆಯಿಂದ ಭವಿಷ್ಯದ ಪೋಷಣೆ'' ಕುರಿತ ಅಂತಾರಾಷ್ಟ್ರೀಯ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

''ಪಶು ಸಂಗೋಪನೆ ಹಾಗೂ ಹಾಲು ಉತ್ಪಾದನೆಯಲ್ಲಿ ಪ್ರಪಂಚದಲ್ಲಿಯೇ ಭಾರತ ಪ್ರಥಮ ಸ್ಥಾನದಲ್ಲಿದೆ. ಆದರೆ, ವಿಶ್ವದ ಸರಾಸರಿ ಹಾಲು ಉತ್ಪಾದಕತೆಗೆ ಹೋಲಿಸಿದರೆ ಭಾರತದ ಸರಾಸರಿ ಹಾಲಿನ ಉತ್ಪಾದನೆಯು ಕಡಿಮೆ ಇದ್ದು, ಇದು ಕಳವಳಕಾರಿಯಾಗಿದೆ,'' ಎಂದರು.

ಸಮಾವೇಶದಲ್ಲಿ ಆತಂಕ

ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ್ ಮಾತನಾಡಿ, ''ದೇಶದಲ್ಲೇ ಹೈನೋದ್ಯಮ ಪ್ರಮುಖ ಉದ್ಯಮವಾಗಿದೆ. ಹೈನೋ ದ್ಯಮ, ಹುಲ್ಲು ಗಾವಲು, ಬೇಸಾಯದ ಮೇಲಿನ ಬೆಳೆಗಳು ಮತ್ತು ಬೆಳೆ ಉಳಿಕೆಗಳ ಮೇಲೆ ಅವಲಂಬಿತವಾಗಿದೆ. ಹೆಚ್ಚು ಹೆಚ್ಚು ಸಾಂದ್ರೀಕರಿಸಿದ ಪಶು ಆಹಾರದ ಮೇಲೆ ರೈತರು ಅವಲಂಬಿಸಿರುವುದರಿಂದ ಇಂದು ಹೈನೋದ್ಯಮ ಲಾಭದಾಯಕವಾಗಿರುವುದಿಲ್ಲ, ರಾಜ್ಯವು ಬರ ಪರಿಸ್ಥಿತಿಯನ್ನು ಎದುರಿಸುತ್ತಿದ್ದು ಮುಂದಿನ ದಿನಗಳಲ್ಲಿ ಮೇವಿನ ಕೊರತೆ ಎದುರಾಗಬಹುದು. ಇಂತಹ ಕೊರತೆಯನ್ನು ಸಮರ್ಪಕವಾಗಿ ಎದುರಿಸಲು ಮೇವಿನ ಬೆಳೆಗಳ ಸಂಶೋಧನೆಯನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವುದು ಅತ್ಯವಶ್ಯ,'' ಎಂದರು.

04-12-2023
Vijayakarnataka Pg.08

ಪುಷ್ಪ ತ್ಯಾಜ್ಯದಿಂದ ಅಗರಬತ್ತಿ ತಯಾರಿಕೆ!

ಸಾವಿರಾರು ರೂ. ಆದಾಯ | ಸ್ಥಳೀಯ ಸಂಸ್ಥೆಗಳಿಗೆ ಮಾದರಿಯಾದ ಬೆಳಗಾವಿ ಪಾಲಿಕೆ

■ ಆರ್. ಶುಳಸಿಕುಮಾರ್ ಬೆಂಗಳೂರು

ರಾಜಧಾನಿ ಬೆಂಗಳೂರು ಸೇರಿ ರಾಜ್ಯದ ಬಹುತೇಕ ಪೌರ ಸಂಸ್ಥೆಗಳ ವ್ಯಾಪ್ತಿಯಲ್ಲಿ ತ್ಯಾಜ್ಯ ವಿಷಯ ಭಾರಿ ಸಮಸ್ಯೆಯಾಗಿ ಕಾಡುತ್ತಿದೆ. ಆದರೆ, ಬೆಳಗಾವಿ ಮಹಾನಗರ ಪಾಲಿಕೆಯು ಪುಷ್ಪತ್ಯಾಜ್ಯದಿಂದ ಅಗರಬತ್ತಿ ತಯಾರಿಸುವ ಮೂಲಕ ಇತರ ಸ್ಥಳೀಯ ಸಂಸ್ಥೆಗಳಿಗೆ ಮಾದರಿಯಾಗಿದೆ.

ಬೆಳಗಾವಿ ಪಾಲಿಕೆ ವ್ಯಾಪ್ತಿಯಲ್ಲಿ ನಿತ್ಯ 250 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿತ್ತು. ಈ ಪೈಕಿ ಹಸಿ ಕಸದ್ದೇ ಸಿಂಹಪಾಲು. ಅಶೋಕನಗರದ ಸಗಟು ಹೂವಿನ ಮಾರುಕಟ್ಟೆಯಲ್ಲಿ ನಿತ್ಯವೂ 300-500 ಕೆ.ಜಿ. ಹೂ ತ್ಯಾಜ್ಯ ಬೀಳುತ್ತಿತ್ತು. ಇದನ್ನು ತಿಪ್ಪೆಗೆ ಬಿಸಾಡದೆ ಸಂಸ್ಕರಣೆ ಮೂಲಕ ಆದಾಯದ ಮೂಲವನ್ನಾಗಿಸುವಲ್ಲಿ ಪಾಲಿಕೆ ಸಫಲವಾಗಿದೆ.

ನಿತ್ಯವೂ ಹೂ ಸಂಗ್ರಹಕ್ಕೆ ಪ್ರತ್ಯೇಕ ಸಿಬ್ಬಂದಿಯನ್ನು ನೇಮಿಸಲಾಗಿದೆ. ಇವರು ಸಂಗ್ರಹಿಸಿದ ಹೂವನ್ನು ಯಂತ್ರದಿಂದ ಪುಡಿ ತಯಾರಿಸಿ ಕಚ್ಚಾವಸ್ತು ತಯಾರಿಸಲಾಗುತ್ತದೆ. ಪುಷ್ಪತ್ಯಾಜ್ಯದಿಂದ 50 ಕೆ.ಜಿ. ಪುಡಿ ಸಿಗುತ್ತಿದ್ದು, ಇದಕ್ಕೆ ಮಿಕ್ಸಿಂಗ್ ಪೌಡರ್ ಹಾಗೂ ಗೈಕಾಸ್ ಅಂಟು ಬಳಸಲಾಗುತ್ತದೆ. ಇವುಗಳನ್ನು ಬಳಸಿ ಬಿದಿರಿನ ಸಣ್ಣ ಕಡ್ಡಿಗಳನ್ನು ಆಗರಬತ್ತಿಯನ್ನಾಗಿಸುವ ತರಬೇತಿಯನ್ನು ದುರ್ಗಾ ಮಹಿಳಾ ಸ್ವಸಹಾಯ ಸಂಘಕ್ಕೆ ನೀಡಲಾಗಿದೆ. 10 ಮಂದಿ ಇರುವ ಈ ಸಂಘ ನಿತ್ಯ 20 ಸಾವಿರ ಆಗರಬತ್ತಿಯನ್ನು ತಯಾರಿಸುತ್ತದೆ. ಮಾಸಿಕ ಸಾವಿರಾರು ರೂ. ಆದಾಯ ಕಂಡುಕೊಳ್ಳುತ್ತಿದ್ದು, ಪಾಲಿಕೆ ಒಡಗಿಸುವ ಜಾಗದಲ್ಲೇ ತ್ಯಾಜ್ಯ ಹೂಗಳನ್ನು ಒಣಗಿಸಿ ಕಚ್ಚಾವಸ್ತುವಾಗಿ ಪರಿವರ್ತಿಸುವ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ.

2 ಲಕ್ಷ ರೂ. ಹೂಡಿಕೆ: ಈ ಹೊಸ ಉಪಕ್ರಮದಿಂದಾಗಿ ಬೆಳಗಾವಿ ಪಾಲಿಕೆಗೆ ಪುಷ್ಪ ತ್ಯಾಜ್ಯವು ವ್ಯಾಜ್ಯವಾಗಿ ಕಂಡಿಲ್ಲ. ಪರಿಸರ ಸ್ವಚ್ಛತೆ ಜತೆಗೆ ಉದ್ಯೋಗಾವಕಾಶ ಸೃಷ್ಟಿಸಲಾಗಿದೆ. 2 ಲಕ್ಷ ರೂ. ಗಳಲ್ಲಿ ಮಿಕ್ಸಿಂಗ್ ಯಂತ್ರ, ಸ್ಟಿಕ್ ಮೇಕಿಂಗ್ ಯಂತ್ರ, ಸಣ್ಣ ಕೆಡ್ ನಿರ್ಮಿಸಲಾಗಿದೆ. ಇಲ್ಲಿಯೇ ಕಚ್ಚಾವಸ್ತುವನ್ನು ರೂಪಿಸಿ ಆಗರಬತ್ತಿ ತಯಾರಿಸಲಾಗುತ್ತಿದೆ. ನಾಲ್ಕೇ ತಿಂಗಳಲ್ಲಿ ಹೊಸ ಐಡಿಯಾ ಬೆಳಗಾವಿ ಜಿಲ್ಲೆಯಾದ್ಯಂತ ಸದ್ದು ಮಾಡಿದೆ.



ವಿಜಯವಾಣಿ ಬೆಳಗಾವಿ

ಮೆಚ್ಚಿದ ಎನ್‌ಜಿಟಿ

ಬೆಳಗಾವಿ ಪಾಲಿಕೆಯ ಪ್ರಯತ್ನವನ್ನು ಎನ್‌ಜಿಟಿಯ ರಾಜ್ಯಮಟ್ಟದ ಉಸ್ತುವಾರಿ ಸಮಿತಿ ಅಧ್ಯಕ್ಷ ನ್ಯಾ. ಸುಭಾಷ್ ಬಿ ಅಡಿ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಎಲ್ಲೆಲ್ಲಿ ಪುಷ್ಪ ತ್ಯಾಜ್ಯ ಲಭ್ಯವಿದೆಯೋ ಅಂತಹ ಕಡೆಗಳಲ್ಲಿ ಘಟಕಗಳ ಸ್ಥಾಪನೆ ಮಾಡಬಹುದೆಂಬ ಸಂದೇಶವನ್ನು ಕೇಂದ್ರ ನಗರಾಭಿವೃದ್ಧಿ ಸಚಿವಾಲಯ ರವಾನಿಸಿದೆ.

ದೇಗುಲಗಳಲ್ಲಿ ಕಾಂಪೋಸ್ಟ್‌ಗೆ ಗಮನ

ಬಿಐಎಂಪಿ ವ್ಯಾಪ್ತಿಯ ಕೆಲ ದೇಗುಲಗಳಲ್ಲಿ ಪುಷ್ಪ ತ್ಯಾಜ್ಯದಿಂದ ಕಾಂಪೋಸ್ಟ್ ಗೊಬ್ಬರ ತಯಾರಿಸಲಾಗುತ್ತಿದೆ. 2016ರಲ್ಲಿ ಕಲ್ಯಾಣನಗರದ ಮಹಾಗಣಪತಿ ದೇವಸ್ಥಾನದಲ್ಲಿ ಬಳಸಿ ಬಿಸಾಡಿದ ಹೂಗಳಿಂದ ಗೊಬ್ಬರ ತಯಾರಿಸುವ ಉಪಕ್ರಮ ಮುನ್ನೆಲೆಗೆ ಬಂದಿತು. ನಂತರದಲ್ಲಿ ಮುಜರಾಯಿ ದೇಗುಲಗಳಲ್ಲೂ ಪುಷ್ಪ ಹಾಗೂ ತರಕಾರಿ ತ್ಯಾಜ್ಯದಿಂದ ಕಾಂಪೋಸ್ಟ್ ತಯಾರಿಸಲಾಗುತ್ತಿದೆ. ಬನಶಂಕರಿ ದೇಗುಲ ತಾತ್ಕಾಲಿಕವಾಗಿ ಸ್ಥಗಿತಗೊಂಡಿರುವ ಗೊಬ್ಬರ ತಯಾರಿಕೆಯನ್ನು ಪುನರಾರಂಭಿಸಲು ಸಿದ್ಧತೆ ನಡೆದಿದೆ.

ರಾಜಧಾನಿಯಲ್ಲಿ ಗೊಬ್ಬರಕ್ಕೆ ಸೀಮಿತ

ಬೆಂಗಳೂರಿನ ಕೆ.ಆರ್.ಮಾರುಕಟ್ಟೆನಲ್ಲಿ ಹೆಚ್ಚು ಪುಷ್ಪ ಮಾರಾಟವಾಗುತ್ತಿದ್ದು, ತ್ಯಾಜ್ಯ ಕೂಡ ಅಧಿಕ ಉತ್ಪತ್ತಿಯಾಗುತ್ತದೆ. ಆದರೆ, ಇಲ್ಲಿನ ತ್ಯಾಜ್ಯವನ್ನು ಗೊಬ್ಬರವಾಗಿ ಪರಿವರ್ತಿಸಲಷ್ಟೇ ಬಳಸಲಾಗುತ್ತಿದೆ. ಕಾಂಪೋಸ್ಟ್ ಗೊಬ್ಬರ ತಯಾರಿಕೆಗೆ ಆದ್ಯತೆ ನೀಡಲಾಗಿದೆ. ಕಾಂಪೋಸ್ಟ್ ಗೊಬ್ಬರಕ್ಕೆ ರೈತರಿಂದ ನಿರಂತರ ಬೇಡಿಕೆ ಇದೆ.

ಬೆಳಗಾವಿಯ ಪುಷ್ಪ ಹರಾಜು ಕೇಂದ್ರದಲ್ಲಿ ಉತ್ಪತ್ತಿಯಾಗುವ ಹೂವಿನ ತ್ಯಾಜ್ಯವನ್ನು ವಿಲೇವಾರಿ ಸಮಸ್ಯೆಯನ್ನು ನಿವಾರಿಸಲು ಆಗರಬತ್ತಿ ತಯಾರಿಕೆಗೆ ಬಳಸಿಕೊಳ್ಳಲಾಗುತ್ತಿದೆ. ಇದರಿಂದ ನಿತ್ಯವೂ ಹೂ ತ್ಯಾಜ್ಯ ವಿಲೇಗೆ ಪರಿಹಾರ ಸಿಕ್ಕಿದ್ದು, ಸ್ವಸಹಾಯ ಸಂಘದ 10 ಮಂದಿಗೆ ಉದ್ಯೋಗ ದೊರೆತಿದೆ. ಈ ಯಶೋಗಾಥೆ ಆಧರಿಸಿ ಬೆಳಗಾವಿ ಜಿಲ್ಲೆಯ ಇತರ ಪೌರ ಸಂಸ್ಥೆಗಳಿಗೂ ವಿಸ್ತರಿಸುವ ಆತಂಕ ಇದೆ.

| ಹನುಮಂತಪ್ಪ ಕಲಾದಗಿ
ಪರಿಸರ ಅಭಿಯಂತರ, ಬೆಳಗಾವಿ ಪಾಲಿಕೆ

04-12-2023
Vijayavani Pg.05

9ರಿಂದ 11ರವರೆಗೆ ನೈಸರ್ಗಿಕ ಕೃಷಿ ಮೇಳ

ಬೆಂಗಳೂರು: ನಗರದ ಜಿಕೆವಿಕೆ ಹಾಗೂ ನೈಸರ್ಗಿಕ ಮತ್ತು ಕೃಷಿ ವಿಶ್ವವಿದ್ಯಾಲಯ ಸಹಯೋಗದಲ್ಲಿ ಡಿ.9ರಿಂದ 11ರ ವರೆಗೆ ಆರ್ಟ್ ಆಫ್ ಲಿವಿಂಗ್‌ನಲ್ಲಿ ಮೂರು ದಿನಗಳ ಸಿರಿಧಾನ್ಯ, ಸಾವಯವ, ನೈಸರ್ಗಿಕ ಕೃಷಿ ಆಧಾರಿತ ಕೃಷಿ ಮೇಳ ಮತ್ತು ವಿಚಾರ ಸಂಕಿರಣವನ್ನು ಏರ್ಪಡಿಸಿದೆ. ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷದ ಆಚರಣೆ ಮತ್ತು ಸಾವಯವ ಮತ್ತು ನೈಸರ್ಗಿಕ ಕೃಷಿ ತಂತ್ರಜ್ಞಾನದ ಅಂಗವಾಗಿ ಕೃಷಿ ಮೇಳ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಕೃಷಿಗೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಸಂಶೋಧನೆ ಮಾಡಿದ ವಿಜ್ಞಾನಿಗಳು ಪ್ರಬಂಧಗಳನ್ನು ಮಂಡಿಸಲಿದ್ದಾರೆ.

04-12-2023
Udayavani Pg.08

ಚಳಿಗಾಲದಲ್ಲಿಯೂ ಎಳನೀರು ದುಬಾರಿ

■ ಎಸ್.ಕೆ.ಚಂದ್ರಶೇಖರ್ ಮೈಸೂರು
chandrashekar.sk@timesgroup.com

ಚಳಿಗಾಲದ ಥಂಡಿ ವಾತಾವರಣದ ಕಾರಣ ಎಳನೀರಿಗೆ ಬೇಡಿಕೆ ಕ್ಷೀಣಿಸುತ್ತದೆ. ಆದರೆ, ಈ ಸಾರಿ ದರ ಮಾತ್ರ ಕಡಿಮೆಯಾಗಿಲ್ಲ. ಹಿಂದಿನ ಸೀಸನ್ ದರದಲ್ಲೇ ಎಳನೀರು ಮಾರಾಟ ಆಗುತ್ತಿದೆ.

ಏಷ್ಯಾದ ಅತಿ ದೊಡ್ಡ ಎಳನೀರು ಮಾರುಕಟ್ಟೆ ಎನಿಸಿಕೊಂಡಿರುವ ಮದ್ದೂರಿನಲ್ಲೂ ಚಳಿಗಾಲದಲ್ಲಿ ವಹಿವಾಟು ಕುಂಠಿತವಾಗಿದೆ. ಹೊಸದಿಲ್ಲಿ, ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರಪ್ರದೇಶ ಸೇರಿ ಹಲವು ಕಡೆಗಳಲ್ಲಿ ಈಗ ಬೇಡಿಕೆ ಕುಸಿದಿದೆ. ಹಾಗಾಗಿ ರೈತರಿಗೆ ಕಡಿಮೆ ದರ ದೊರೆಯುತ್ತಿದ್ದರೂ ಆದರ ಲಾಭ ಮಾತ್ರ ಗ್ರಾಹಕರಿಗೆ ದೊರಕುತ್ತಿಲ್ಲ.

ಮಧ್ಯವರ್ತಿಗಳಿಗೆ ಕೈ ತುಂಬ ಹಣ:



''ಮಾರುಕಟ್ಟೆಯಲ್ಲಿ ಎಳನೀರು ಒಂದಕ್ಕೆ 35ರಿಂದ40ರೂ.ಗೆಮಾರಾಟವಾಗುತ್ತಿದ್ದರೂ, ಬೆಳೆಗಾರರ ಕೈಗೆ ಮಾತ್ರ ಅಲ್ಪ ಹಣವಷ್ಟೇ ಸೇರುತ್ತಿದೆ,'' ಎಂದು ತೆಂಗು ಬೆಳಗಾರರು ಬೇಸರ ವ್ಯಕ್ತಪಡಿಸಿದ್ದಾರೆ. ''ಇಲ್ಲೂ ಮಧ್ಯವರ್ತಿಗಳದ್ದೇ ಕಾರುಬಾರಾಗಿದ್ದು, ಒಂದು ಮರದ ಎಳನೀರು ಇಳಿಸಲು ಹಾಗೂ ಬಾಡಿಗೆ ಸೇರಿಸಿ, ಇತರ ಖರ್ಚೆಲ್ಲ ಕಳೆದು ಒಂದು ಎಳನೀರು ಮಾರುಕಟ್ಟೆಗೆ ಬರುವಷ್ಟರಲ್ಲಿ ಅದರ ಬೆಲೆ 20ರಿಂದ 25 ರೂ.ಗೆ ಆಗುತ್ತದೆ. ಪ್ರವಾಸಿ ತಾಣಗಳ ಬಿಳಿಯ ಚಿಲ್ಲರೆ ಮಾರಾಟ ಬೆಲೆ 40 ರೂ. ಇದೆ,'' ಎನ್ನುತ್ತಾರೆ ವ್ಯಾಪಾರಿಗಳು.

ಇಲ್ಲಿ30 ರೂ. ಮಾತ್ರ: ''ಚಳಿಗಾಲವಾದ್ದರಿಂದ 25 ದಿನದ ಹಿಂದೆಯೇ ಎಳನೀರು ದರ ಕಡಿಮೆಯಾಗಿದ್ದು, ನಾನು ಕೂಡ ಗ್ರಾಹಕರಿಗೆ 30 ರೂ.ಗೆ ಮಾರಾಟ ಮಾಡುತ್ತಿದ್ದೇನೆ. ಈ ಮುಂಚೆ 40 ರೂ.ಗೆ ಮಾರಾಟ ಮಾಡುತ್ತಿದ್ದೆ. 22ರಿಂದ 25 ರೂ. ವರೆಗೆ ಸಗಟು ದರದಲ್ಲಿ ನಮಗೆ ಎಳನೀರು ದೊರೆಯುವಾಗ ನಾವು ಮಾರಾಟ ಮಾಡುವಾಗಲೂ ಕಡಿಮೆ ಮಾಡಿಕೊಳ್ಳದಿದ್ದಲ್ಲಿ ಹೇಗೆ?,'' ಎನ್ನುತ್ತಾರೆ ಎಳನೀರು ವ್ಯಾಪಾರಿ ವಿವೇಕಾನಂದನಗರದ ಮಹದೇವ ನಾಯಕ.

04-12-2023
Vijayakarnataka Pg.02



ಗೃಹಬಳಕೆ ಉತ್ಪನ್ನಗಳ ತಯಾರಿಕೆಗೂ ಸೈ

ರತ್ನಮ್ಮ ಮಹಿಳೆಯರಿಗೆ ಸಿರಿಧಾನ್ಯ ಸಂಸ್ಕರಣಾ ತರಬೇತಿ ನೀಡಿ, ಉತ್ಪನ್ನ ತಯಾರಿಸಲು ಪ್ರೋತ್ಸಾಹಿಸುವ ಜತೆಗೆ ಹಲವು ಗೃಹ ಬಳಕೆ ವಸ್ತುಗಳನ್ನು ತಯಾರಿಸಿ ಮಾರಾಟದಲ್ಲಿ ತೊಡಗಿಸಿದ್ದಾರೆ. ಉತ್ಪನ್ನಗಳ ರುಚಿ, ಶುದ್ಧತೆಗೆ ಮಾರುಹೋದ ಗ್ರಾಹಕರು ಮನೆಗೇ ಬಂದು ಖರೀದಿಸುತ್ತಿದ್ದು, ಹೊರಜಿಲ್ಲೆಗಳ ಗ್ರಾಹಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಪ್ರಶಂಸೆ ಸರ್ಕಾರದಿಂದ ಜಾರಿಗೆ ತಂದಿರುವ ಎನ್‌ಆರ್‌ಎಂಎಲ್ ಯೋಜನೆಯ ನೋಂದಣಿ ಮಾಡಿಸಿಕೊಂಡಿದ್ದು, ನಬಾರ್ಡ್, ಪ್ರಗತಿ ಗ್ರಾಮೀಣ ಬ್ಯಾಂಕ್ ಅಧಿಕಾರಿಗಳು ಭೇಟಿ ನೀಡಿ ಪ್ರಶಂಸಿಸಿದ್ದಾರೆ. ಬಾಗಲಕೋಟೆ ಕೃಷಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಇಲ್ಲಿಗೆ ಭೇಟಿ ನೀಡಿ ತರಬೇತಿ ಪಡೆದುಕೊಳ್ಳುತ್ತಿದ್ದಾರೆ. ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಇಲ್ಲಿಗೆ ಬರುತ್ತಾರೆ. ಇತ್ತೀಚೆಗೆ ಬೆಂಗಳೂರಿನ ಜಿಕೆವಿಕೆಯಲ್ಲಿ ನಡೆದ ಕೃಷಿ ಮೇಳದಲ್ಲಿ ರತ್ನಮ್ಮ ಅವರಿಗೆ ರಾಜ್ಯ ಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

ರತ್ನಮ್ಮ ಧಾನ್ಯಸಿರಿ!

ಸಿರಿಧಾನ್ಯ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದ ಸಾಧಕಿ

ಕಿರುವಾರ ಎಸ್.ಸುದರ್ಶನ್ ಕೋಲಾರ

ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಯಶೋಗಾಥೆ ಬಾನೆತ್ತರಕ್ಕೆ ಬೆಳೆದಿರುವುದು ಗೊತ್ತಿರುವ ಸಂಗತಿಯೇ. ಆದರೆ ಅನಾದಿ ಕಾಲದಿಂದಲೂ ಕೃಷಿ ಕ್ಷೇತ್ರದಲ್ಲಿ ಮಹಿಳೆಯರು ಸದ್ದಿಲ್ಲದೆ ಎಲೆ ಮರೆ ಕಾಯಿಯಂತೆ ಬಿಸಿಲು-ಮಳೆಗೆ ಜಗ್ಗದೆ ದುಡಿಯತ್ತಲೇ ಇದ್ದಾರೆ. ಆದರೆ ಈ ಕಾಲ ಬದಲಾಗಿದೆ. ಬದ್ಧತೆಯಿದ್ದು ಬುದ್ಧಿ ಉಪಯೋಗಿಸಿದರೆ ಈ ಕ್ಷೇತ್ರದಲ್ಲಿ ಎಲ್ಲವೂ ಸಾಧ್ಯ ಎಂದು ತೋರಿಸಿದ್ದಾರೆ ಕೋಲಾರದ ಸಾಧಕ ಕೃಷಿ ಮಹಿಳೆ ರತ್ನಮ್ಮ.

ಶ್ರೀನಿವಾಸಪುರ ತಾಲೂಕಿನ ಗುಂಡಮ್ಮನತ್ತ ಗ್ರಾಮದ ರತ್ನಮ್ಮ ಸಿರಿಧಾನ್ಯಗಳ ಉತ್ಪಾದನೆ ಹಾಗೂ ಮೌಲ್ಯವರ್ಧನೆಯಲ್ಲಿ ಕ್ರಾಂತಿ ಮಾಡಿದ್ದು, ಜಾಗತಿಕ ಮಟ್ಟದಲ್ಲಿ ಹೆಸರಾಂತ ಕಂಪನಿಗಳಿಗೆ ಸೆಡ್ಡು ಹೊಡೆಯುವ ರೀತಿ ಛಲದಿಂದ ಮುಂದೆ ಸಾಗುತ್ತಿದ್ದಾರೆ. ಕೃಷಿಕ ಮಹಿಳೆಯರ ದಿನದಂದು ಅವರ ಯಶೋಗಾಥೆಯನ್ನು ಇಲ್ಲಿ ಮೆಲುಕು ಹಾಕಲಾಗಿದೆ.

ಶಿಕ್ಷಕಿಯಾಗಬೇಕು, ಶೈಕ್ಷಣಿಕ ಕ್ಷೇತ್ರದಲ್ಲಿ ಗುರುತರ ಕೆಲಸ ಮಾಡಬೇಕು ಎಂಬುದು ರತ್ನಮ್ಮ ಕನಸಾಗಿತ್ತು. ಆದರೆ ಕಾರಣಾಂತರಗಳಿಂದ ಶಿಕ್ಷಕಿಯಾಗುವ ಬಯಕೆ ಈಡೇರಲಿಲ್ಲ. ಇದರೆ ಇಷ್ಟಕ್ಕೆ ಸುಮ್ಮನಾಗದ ರತ್ನಮ್ಮ ಪತಿ ನಾಗಾಯಣಸ್ವಾಮಿ ಹಾಗೂ ಮಕ್ಕಳ ಸಹಕಾರ ಪಡೆದು



ಸಿರಿಧಾನ್ಯ ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಸಾಮೆ, ನವಣೆ, ಆರಕ, ಊದಲು, ಕೊರಲೆ, ಬರಗು, ರಾಗಿ, ಜೋಳ, ಸಜ್ಜೆ ಬೆಳೆಯುತ್ತಿದ್ದು, ಅಗತ್ಯ ತರಬೇತಿ ಪಡೆದು ಸಂಸ್ಕರಣ ಘಟಕ ಸ್ಥಾಪಿಸಿದ್ದಾರೆ. ಸಿರಿಧಾನ್ಯ ಸ್ವಸಹಾಯ ಸಂಘ ಸ್ಥಾಪಿಸಿ ಉತ್ತಮ ಲಾಭಗಳಿಸಿ ಬದುಕು ರೂಪಿಸಿಕೊಂಡಿದ್ದಾರೆ.

ಗ್ರಾಮೀಣ ಮಹಿಳೆಯರಿಗೆ ಮಾದರಿ

ಆರಂಭದಲ್ಲಿ ರೈತರಿಂದ ಉತ್ತಮ ಪ್ರತಿಕ್ರಿಯೆ ಕಂಡುಬರಲಿಲ್ಲ. ಎದೆಗುಂದದೆ ತಾವು ಹಿಡಿದ ಮಾರ್ಗದಲ್ಲಿ ಮುಂದುವರಿದರು. ಸಿರಿಧಾನ್ಯ ಬೇಸಾಯ ಲಾಭದಾಯಕ ಎಂಬುದನ್ನು ಅರಿತು ಕೃಷಿಯ ಮೂಲಕ ತೋರಿಸಿಕೊಟ್ಟರು. ಸುತ್ತಮುತ್ತಲಿನ ರೈತರು ಬೆಳೆದ ಧಾನ್ಯ ಖರೀದಿಸಿ ಸಂಸ್ಕರಣ ಘಟಕದಲ್ಲಿ ವಿವಿಧ ಪುಡಿ ತಯಾರಿಸಿ ಪ್ಯಾಕ್ ಮಾಡಿ ಮಾರಾಟ ಮಾಡತೊಡಗಿದರು. ಆರೋಗ್ಯಕರ ಕಬ್ಬಿಣಾಂಶ ಮತ್ತು ವಿಟಮಿನ್ 'ಸಿ' ಭರಿತ ವೇದಿಕ್ ಸಿರಿಧಾನ್ಯ ಆರೋಗ್ಯ ಪೇಯ ತಯಾರಿಕೆಗೆ ಪೇಟೆಂಟ್ ಪಡೆದುಕೊಂಡಿರುವ ರತ್ನಮ್ಮ, ಗ್ರಾಮೀಣ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ಅವರ ಉತ್ಪನ್ನಗಳು ಜಿಲ್ಲೆ ಹಾಗೂ ರಾಜ್ಯಮಟ್ಟದ ಪ್ರದರ್ಶಗಳಲ್ಲಿ ಪ್ರದರ್ಶಿಸಲ್ಪಟ್ಟು ಗ್ರಾಹಕರ ಮೆಚ್ಚುಗೆ ಪಡೆದಿದ್ದಾರೆ. ಮಹಿಳಾ ಸಂಘದ ಸದಸ್ಯರು ತಯಾರಿಸಿಕೊಡುವ ಉತ್ಪನ್ನಗಳನ್ನು ಇವರದ್ದೆ ಬ್ರ್ಯಾಂಡ್ ಅಡಿ ಮಾರಾಟ ಮಾಡಿಕೊಡುತ್ತಿದ್ದಾರೆ.

ಪ್ರಶಸ್ತಿಗೆ ಭಾಜನ

ಈ ಸಾಧನೆಗೆ ರತ್ನಮ್ಮ ರಾಷ್ಟ್ರಮಟ್ಟದ ಪ್ರಶಸ್ತಿಗೂ ಭಾಜನರಾಗಿದ್ದು, ಡಿ.7ರಂದು ದೆಹಲಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮಿಲಿಯೇನರ್ -ಬಿಲಿಯೇನರ್ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ರಾಜ್ಯದ 50 ಮಂದಿ ಕೃಷಿ ಸಾಧಕರ ಪೈಕಿ ರತ್ನಮ್ಮ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.



ಆರಂಭದಲ್ಲಿ ಕಷ್ಟ ಅನಿಸಿದರೂ ಈಗ ಖುಷಿ ತಂದಿದೆ. ಮನೆಯ ಸದಸ್ಯರ ಸಹಕಾರ, ಮಹಿಳಾ ಸಂಘದ ಸಹಕಾರದಿಂದ ಗ್ರಾಹಕರ ಮೆಚ್ಚುಗೆಗೆ ಪಾತ್ರವಾಗಿದ್ದೇನೆ. ಸಿರಿಧಾನ್ಯಗಳ ಉತ್ಪನ್ನಗಳು ಮನುಷ್ಯನ ದೇಹಕ್ಕೆ ಆರೋಗ್ಯಕರ ಎಂಬ ಅರಿವು ಮೂಡಿದರೆ ಸ್ವಯಂ ಪ್ರೇರಿತರಾಗಿ ಖರೀದಿ ಮಾಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಬೇಡಿಕೆ ಹೆಚ್ಚಾಗಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

| ರತ್ನಮ್ಮ ಸಾಧಕಿ.

ಇಂದು ಕೃಷಿಕ ಮಹಿಳೆಯರ ದಿನ...

ರತ್ನಮ್ಮ ಮೂರು ಎಕರೆ ಜಮೀನಿನಲ್ಲಿ ರಾಗಿ, ನವಣೆ, ಮಾವು ಮತ್ತು ಕರಿಬೇವು ಬೆಳೆಯುತ್ತಿದ್ದಾರೆ. ಜತೆಗೆ ಮಾವಿನ ತೋಟದಲ್ಲಿ ಹಿಪ್ಪುನೇರಳೆಯನ್ನು ಅಂತರ ಬೆಳೆಯಾಗಿ ಬೆಳೆಯುತ್ತಿದ್ದಾರೆ. ಕೃಷಿ ಪೂರಕ ಹೈನುಗಾರಿಕೆಯಲ್ಲೂ ತೊಡಗಿಸಿಕೊಂಡಿದ್ದು ಹಸು, ಎಮ್ಮೆ ಮತ್ತು ಕುರಿ ಸಾಕಣೆ ಮಾಡುತ್ತಿದ್ದಾರೆ. ಹೈನುಗಾರಿಕೆಗೆ ಪೂರಕವಾಗಿ ಮೇವಿನ ಜೋಳ ಬೆಳೆದು ಉಪಾಯವಾಗಿ ಲಾಭ ಗಳಿಸುವ ಮಾರ್ಗ ಕಂಡುಕೊಂಡಿದ್ದಾರೆ. ಐದೂವರೆ ವರ್ಷಗಳಿಂದ ಕೋಲಾರ ಕೃಷಿ ವಿಜ್ಞಾನ ಕೇಂದ್ರದಲ್ಲಿ ತರಬೇತಿ ಪಡೆದು ಮುಖ್ಯ ಕಸುಬಾಗಿ ಸಿರಿಧಾನ್ಯಗಳ ಮೌಲ್ಯವರ್ಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಬ್ಯಾಂಕ್, ಕೃಷಿ ಇಲಾಖೆಯ ಸಿರಿಧಾನ್ಯ ಘಟಕ ಸ್ಥಾಪಿಸಿ ಸಂಸ್ಕರಣೆ ಯಂತ್ರೋಪಕರಣಗಳನ್ನು ಅಳವಡಿಸಿಕೊಂಡಿದ್ದಾರೆ. ಅಲ್ಲದೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಿರಿಧಾನ್ಯ ಬೆಳೆಯುವ ರೈತರಿಗೆ ಸಂಸ್ಕರಣೆ ಮಾಡಿಕೊಟ್ಟು ಅಧಿಕ ಲಾಭ ಪಡೆಯುತ್ತಿದ್ದಾರೆ.

ಖ್ಯಾತಿ ತಂದ ವೇದಿಕೆ ಉತ್ಪನ್ನ: ಆರಂಭದಲ್ಲಿ ಹೈನೋದ್ಯಮ, ರೇಷ್ಮೆ ಹುಳು ಸಾಕಣೆ ಮಾಡಿ ಬದುಕು ಕಟ್ಟಿಕೊಳ್ಳಲು ದಾರಿ ಕಂಡುಕೊಂಡಿದ್ದರು. ಇದರಿಂದ ಬಂದ ಹಣದಿಂದಲೇ ಮಕ್ಕಳ ವಿದ್ಯಾಭ್ಯಾಸ, ಕುಟುಂಬದ ನಿರ್ವಹಣೆ ಮಾಡುತ್ತಿದ್ದರು. ಕೊಳವೆಬಾವಿಯಲ್ಲಿ ನೀರಿನ ಇಳುವರಿ ಕಡಿಮೆಯಾಗುತ್ತಿದ್ದಂತೆ ರೇಷ್ಮೆ ಉತ್ಪಾದನೆಯಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಲಾಭಗಳಿಸಲು ಸಾಧ್ಯವಾಗಲಿಲ್ಲ. 5 ವರ್ಷಗಳ ಹಿಂದೆ ಗಂಗಮ್ಮ ಸ್ತ್ರೀ ಶಕ್ತಿ ಸಂಘ ಕಟ್ಟಿಕೊಂಡು ಅದರಲ್ಲಿ ಸಣ್ಣ ಪ್ರಮಾಣದಲ್ಲಿ ಸಾಲ ಪಡೆದು ಸಿರಿಧಾನ್ಯಗಳ ಉತ್ಪನ್ನ ಉತ್ಪಾದಿಸಲು ಪ್ರಾರಂಭಿಸಿದರು. ಈ ಉತ್ಪನ್ನಗಳನ್ನು ಮಾರುಕಟ್ಟೆ ಮಾಡಲು ಕಷ್ಟ ಎನಿಸಿದರೂ ಪಟ್ಟು ಬಿಡದೆ ಕೆಲಸ ಶುರು ಮಾಡಿದರು. ಸರ್ಕಾರಿ ಕಾರ್ಯಕ್ರಮ, ಸಮಾವೇಶ, ಮೇಳಗಳಲ್ಲಿ ಸ್ಟಾಲ್‌ಗಳನ್ನು ಹಾಕಿ ಸಿರಿಧಾನ್ಯ ಉತ್ಪನ್ನಗಳ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮಾಡುವುದರ ಜತೆಗೆ ಸಂಪರ್ಕ ಸಂಖ್ಯೆ ನೀಡಿ ಮಾರುಕಟ್ಟೆ ಕಂಡುಕೊಂಡರು. ಈಗ ವೇದಿಕ್ ಸಿರಿಧಾನ್ಯಗಳ ಪ್ರಾಡಕ್ಟ್‌ಸ್ ಎಂದೇ ಹೆಸರು ಗಳಿಸಿದೆ.

ವೇದಿಕ್ ಎಂಟರ್‌ಪ್ರೈಸಸ್ ಸಂಸ್ಥೆ ತೆರೆದು ಸಿರಿಧಾನ್ಯಗಳ ಮತ್ತು ಉತ್ಪನ್ನಗಳಾದ ಮಾಲ್ಟ್, ಪಾಯಸಾ, ದೋಸೆ ಮಿಶ್ರಣ, ಇಡ್ಲಿ ಮಿಶ್ರಣ, ಹಪ್ಪಳ, ಮಿಸೆಲ್ಲಿ, ಪಾಸ್ತ ಇತ್ಯಾದಿಗಳನ್ನು ತಯಾರಿಸಿ ವೇದಿಕ್ ಪು ಮತ್ತು ವರದಾ ಫುಡ್ ಎಂಬ ಬ್ರ್ಯಾಂಡ್‌ನಲ್ಲಿ ಮಾರಾಟ ಮಾಡುತ್ತಿದ್ದಾರೆ. ಜತೆಗೆ ತಾಲೂಕು, ಜಿಲ್ಲೆಗೆ ಸಿಮೀತವಾ ಮಾರಾಟವು ಹೀಗೆ ಹೊರಜಿಲ್ಲೆಗಳಿಗೂ ವಿಸ್ತರಿಸಿದೆ.

04-12-2023
Udayavani Pg.08